ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017-18 ದಿನಾಂಕ: 15-6-2017

# ಮಾಧ್ಯಮದವರ ಗಮನಕ್ಕೆ

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಮಾನವ ಹಕ್ಕುಗಳ ರಕ್ಷಣೆ, ಅನಕ್ಷರತೆ ಕುರಿತು ನಾಗರಿಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಮಾಧ್ಯಮಗಳ ಮೂಲಕ ಪ್ರಕಟಣೆ ಹಾಗೂ ಕಾರ್ಯಾಗಾರಗಳ ಮೂಲಕ ಅರಿವು ಮೂಡಿಸುವ ಕಾರ್ಯ ನಿರ್ವಹಿಸುತ್ತಿದೆ.

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ಸಹಯೋಗದೊಂದಿಗೆ "ಮಾನವ ಹಕ್ಕುಗಳ ಪ್ರಚಾರ ಮತ್ತು ರಕ್ಷಣೆ ಕುರಿತು ಮಾಧ್ಯಮಗಳ ಪಾತ್ರ " ವಿಷಯದ ಕುರಿತು ಒಂದು ದಿನದ ಕಾರ್ಯಾಗಾರವನ್ನು ಬೆಂಗಳೂರಿನ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ಆವರಣದಲ್ಲಿ ಜೂನ್ 22 ರಂದು ಆಯೋಜಿಸಿದೆ.

ಕಾರ್ಯಾಗಾರದಲ್ಲಿ ಆಯೋಗದ ಅಧ್ಯಕ್ಷರಾದ ನ್ಯಾಯಮೂರ್ತಿ ಹೆಚ್.ಎಲ್. ದತ್ತು, ಆಯೋಗದ ಸದಸ್ಯ, ನ್ಯಾಯಮೂರ್ತಿ ಡಿ. ಮುರುಗೇಶನ್, ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಆರ್. ವೆಂಕಟರಾವ್, ಫ್ರಂಟ್‌ಲೈನ್ ಎಡಿಟರ್ ಇನ್ ಚೀಫ್ ಶೇಖರ್ ಗುಪ್ತ ಅವರುಗಳು ಮಾತನಾಡಲಿರುವರು.

ಈ ಕಾರ್ಯಾಗಾರದಲ್ಲಿ ಭಾಗವಹಿಸಲಿರುವ ಮಾಧ್ಯಮದವರು ಅಂದು ಬೆಳಿಗ್ಗೆ 10.00 ಗಂಟೆಗೆ ಉಪಸ್ಥಿತರಿಸಲು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಪ್ರಕಟಣೆ ತಿಳಿಸಿದೆ.

# ಮಾಧ್ಯಮ ಮುಖ್ಯಸ್ಥರ ಗಮನಕ್ಕೆ

**ಜೂನ್ 17 ರಂದು ಘನತೆವೆತ್ತ ರಾಷ್ಟ್ರಪತಿ ಅವರು ನಮ್ಮ ಮೆಟ್ರೋ ಹಂತ 1 ಕ್ಕೆ ವಿಧಾನಸೌಧ ಆವರಣದಲ್ಲಿ ಚಾಲನೆ ನೀಡಲಿರುವ ಕಾರ್ಯಕ್ರಮದ ವರದಿಗೆ ಆಗಮಿಸುವ ರಾಜ್ಯ ಮತ್ತು ರಾಷ್ಟ್ರಮಟ್ಟದ ದಿನಪತ್ರಿಕೆ ಮತ್ತು ಸುದ್ದಿ ವಾಹಿನಿಗಳ ಮಾನ್ಯತಾ ಪತ್ರ ಹೊಂದಿರುವ ಒಬ್ಬ ವರದಿಗಾರರು ಮತ್ತು ಒಬ್ಬ ಛಾಯಾಗ್ರಾಹಕರಿಗೆ ವಾರ್ತಾ ಮತ್ತು**

ಸಾರ್ವಜನಿಕ ಸಂಪರ್ಕ ಇಲಾಖೆಯ ಸುದ್ದಿ ಮತ್ತು ಪತ್ರಿಕಾ ಶಾಖೆಯಲ್ಲಿ ಆಹ್ವಾನ ಪತ್ರವನ್ನು ನಾಳೆ ಬೆಳಗ್ಗೆ 11 ಗಂಟೆಯಿಂದ ವಿತರಿಸಲಾಗುವುದು.

ಈ ಆಹ್ವಾನ ಪತ್ರ ಮತ್ತು ಇತ್ತೀಚಿನ ಸ್ಟ್ಯಾಂಪ್ ಅಳತೆಯ ಒಂದು ಭಾವಚಿತ್ರದೊಂದಿಗೆ ಪೊಲೀಸ್ ಆಯುಕ್ತರ ಕಚೇರಿಯಿಂದ ಭದ್ರತಾ ಪಾಸ್ ಅನ್ನು ಪಡೆದುಕೊಳ್ಳಬಹುದಾಗಿದೆ.

## ಪತ್ರಿಕಾ ಪ್ರಕಟಣೆ

ವಿಧಾನಸಭೆಯಲ್ಲಿ ಇಂದು

### ಕೌಶಲ್ಯಾಭಿವೃದ್ಧಿ ಯೋಜನೆಯಡಿ 73.501 ಅರ್ಜಿ ಸ್ವೀಕಾರ

ಬೆಂಗಳೂರು, ಜೂನ್ 15, (ಕರ್ನಾಟಕ ವಾರ್ತೆ)

ಪ್ರಸಕ್ತ ಸಾಲಿನಲ್ಲಿ ಮುಖ್ಯಮಂತ್ರಿಗಳ ಕೌಶಲ್ಯಾಭಿವೃದ್ಧಿ ಯೋಜನೆಯಡಿಯಲ್ಲಿ ಅಲ್ಪಸಂಖ್ಯಾತರರಿಂದ 73.501 ಅರ್ಜಿಗಳು ಸ್ವೀಕರವಾಗಿದ್ದು ಅವರಿಗೆ ವಿವಿಧ ರೀತಿಯ ಉದ್ಯೋಗಕ್ಕೆ ಅನುಕೂಲವಾಗುವ ತರಬೇತಿಯನ್ನು ನೀಡುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ಇಂದು ಕೆ. ಅಬ್ದುಲ್ ಜಬ್ಬಾರ್ ಅವರ ಪ್ರಶ್ನೆಗೆ ಉತ್ತರಿಸುತ್ತಾ “ಕೌಶಲ್ಯ ಕರ್ನಾಟಕ ನೋಂದಣಿ ಅಭಿಯಾನ” ಕಾರ್ಯಕ್ರಮ ಪ್ರಾರಂಭಿಸಿದ್ದು, ಇಲಾಖೆಯ ವೆಬ್ ಪೋರ್ಟಲ್ www.kaushalkar.com ನಲ್ಲಿ ಅಭ್ಯರ್ಥಿಗಳ ಮತ್ತು ತರಬೇತಿ ಕೇಂದ್ರಗಳ ನೋಂದಣಿ ಮಾಡಿಕೊಳ್ಳಲಾಗುತ್ತಿದೆ ಎಂದು ಸದನಕ್ಕೆ ತಿಳಿಸಿದರು.

ನೋಂದಣಿಮಾಡಿಕೊಳ್ಳುವ ಪ್ರತಿ ಅಭ್ಯರ್ಥಿಗೆ ಅವರು ಇಚ್ಛಿಸುವ ಐದು ಕೋರ್ಸುಗಳ ಆಯ್ಕೆಗೆ ಅವಕಾಶ ನೀಡಲಾಗಿದೆ. ಎನ್.ಎಸ್.ಡಿ.ಸಿ. ವತಿಯಿಂದ ಅನುಮೋದಿಸಿದ 529 “ಜಾಬ್ ರೋಲ್ಸ್” ಗಳಲ್ಲಿ ತರಬೇತಿ ನೀಡಲಾಗುವುದು ಎಂದು ಸದಸ್ಯರಿಗೆ ತಿಳಿಸಿದರು.

ಎಸ್‌ಎಂ:ಕೆಎನ್‌ವಿ:ಜೆಡಿ:ಜಿಪಿಆರ್.

## ಬೃಹತ್ ಬೆಂಗಳೂರು ಮಹಾನಗರಪಾಲಿಕೆಯಲ್ಲಿ 1953 ರಾಜಕಾಲುವೆಗಳ ಒತ್ತುವರಿ

**ಬೆಂಗಳೂರು, ಜೂನ್ 15, (ಕರ್ನಾಟಕ ವಾರ್ತೆ)**

ಕಳೆದ ಮೂರು ವರ್ಷಗಳಲ್ಲಿ ಬೃಹತ್ ಬೆಂಗಳೂರು ಮಹಾನಗರಪಾಲಿಕೆಯಲ್ಲಿ 1953 ರಾಜಕಾಲುವೆಗಳ ಒತ್ತುವರಿ ಪ್ರಕರಣಗಳನ್ನು ಗುರುತಿಸಿದ್ದು, ಇದರಲ್ಲಿ 1225 ತೆರವುಗೊಳಿಸಿರುವ ರಾಜಕಾಲುವೆ ಪ್ರಕರಣಗಳು, 728 ಉಳಿದಿರುವ ಪ್ರಕರಣಗಳು ಇವುಗಳನ್ನು 2 ರಿಂದ 3 ತಿಂಗಳೊಳಗಾಗಿ ಸಂಪೂರ್ಣ ತೆರವುಗೊಳಿಸಲಾಗುವುದು ಎಂದು ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜಾನಾ ಸಚಿವ ಕೆ.ಜೆ. ಜಾರ್ಜ್ ಅವರು ತಿಳಿಸಿದರು.

ಇಂದು ವಿಧಾನಸಭೆಯಲ್ಲಿ ಸದಸ್ಯ ಸುನೀಲ್ ಸುಬ್ರಮಣಿ ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ, ನ್ಯಾಯಾಲಯದಲ್ಲಿರುವ ಪ್ರಕರಣಗಳನ್ನು ಬಿಟ್ಟು ಉಳಿದ ಪ್ರಕರಣಗಳಲ್ಲಿ ಒತ್ತುವರಿ ಜಾಗಗಳನ್ನು ಜಂಟಿ ನಿರ್ದೇಶಕರು, ಭೂಮಾಪನ ಇಲಾಖೆಯ ಭೂಮಾಪಕರಿಂದ ಕಾಲುವೆಗಳಲ್ಲಿ ಗಡಿ ಮತ್ತು ಒತ್ತುವರಿಗಳನ್ನು ಗುರುತಿಸಿ, ದೃಢೀಕೃತ ಸರ್ವೆ ನಕ್ಷೆಯನ್ನು ಪಡೆದು ಒತ್ತುವರಿಗಳ ತೆರವು ಕಾರ್ಯಾಚರಣೆಯನ್ನು ನಿರಂತರವಾಗಿ ಕೈಗೊಳ್ಳಲಾಗುತ್ತಿದೆ ಎಂದು ಸಚಿವರು ಸದನಕ್ಕೆ ತಿಳಿಸಿದರು.

ಎಸ್‌ಎಂ:ಕೆಎನ್‌ವಿ:ಜೆಡಿ:ಜಿಪಿಆರ್.

## ರಾಜ್ಯಾದ್ಯಂತ 2402 ಹೆದ್ದಾರಿ ಫಲಕಗಳಲ್ಲಿ ದೃಶ್ಯ ಮುದ್ರಿತ ವಿನೈಲ್‌ಗಳ ಅಳವಡಿಕೆ

**ಬೆಂಗಳೂರು, ಜೂನ್ 15, (ಕರ್ನಾಟಕ ವಾರ್ತೆ)**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಒಡೆತನದಲ್ಲಿರುವ ಪ್ರಚಾರ ಫಲಕಗಳಲ್ಲಿ ವಿನೈಲ್ ಬೋರ್ಡ್‌ಗಳನ್ನು ಅಳವಡಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ಇಂದು ಆರ್. ಪ್ರಸನ್ನಕುಮಾರ್ ಅವರ ಪ್ರಶ್ನೆಗೆ ಉತ್ತರಿಸುತ್ತಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಒಡೆತನದಲ್ಲಿ ರಾಜ್ಯಾದ್ಯಂತ ಒಟ್ಟು 2402 ಹೆದ್ದಾರಿ ಫಲಕಗಳಲ್ಲಿ ಸರಕಾರದ ಯೋಜನೆಗಳನ್ನು ದೃಶ್ಯ ಮುದ್ರಿತ ವಿನೈಲ್‌ಗಳನ್ನು ಅಳವಡಿಸಲಾಗಿದೆ ಎಂದು ಸದನಕ್ಕೆ ತಿಳಿಸಿದರು.

ಎಸ್‌ಎಂ:ಕೆಎನ್‌ವಿ:ಜೆಡಿ:ಜಿಪಿಆರ್.

## ವಿಧಾನ ಪರಿಷತ್ತಿನಲ್ಲಿ ಇಂದು:

ಮಹಾಲಕ್ಷ್ಮೀಲೇಔಟ್ ಶಾಸಕ ಕೆ. ಗೋಪಾಲಯ್ಯ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಕೆ.ಆರ್. ರಮೇಶ್ ಕುಮಾರ್, ರಾಜ್ಯದಲ್ಲಿ ಎಲ್ಲರಿಗೂ ಸಾರ್ವತ್ರಿಕ ಆರೋಗ್ಯ ವಿಮೆ ಯೋಜನೆಯನ್ನು (ಯೂನಿವರ್ಸಲ್ ಹೆಲ್ತ್ ಕೇರ್ ಕವರೇಜ್) ಜಾರಿಗೆ ತರಲು ಸರ್ಕಾರ ಸದರಿ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಿದೆ. ಆರೋಗ್ಯ ಸಮಸ್ಯೆಗಳನ್ನು ಎಪಿಎಲ್, ಬಿಪಿಎಲ್ ಎಂದು ಬೇಧಮಾಡದೆ ಎಲ್ಲರಿಗೂ ಪ್ರಾಥಮಿಕ, ದ್ವಿತೀಯ ಹಾಗೂ ತೃತೀಯ ಹಂತದ ಚಿಕಿತ್ಸೆಯನ್ನು ಉಚಿತವಾಗಿ ಈ ಯೋಜನೆಯಡಿ ನೀಡಲಾಗುವುದು. ರಾಜ್ಯದ ಎಲ್ಲಾ ಜನತೆಗೂ 'ಸಾರ್ವತ್ರಿಕ ಆರೋಗ್ಯ ಕಾರ್ಡ್' ಒದಗಿಸಿ ಸರ್ಕಾರಿ ಮತ್ತು ಸರ್ಕಾರದೊಂದಿಗೆ ಒಡಂಬಡಿಕೆ ಮಾಡಿಕೊಂಡ ಖಾಸಗಿ ಆಸ್ಪತ್ರೆಗಳ ಮೂಲಕ ಚಿಕಿತ್ಸೆ ಒದಗಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗುವುದು ಎಂದ ಅವರು ಮೊದಲನೆ ವರ್ಷ ರೂ 796 ಕೋಟಿ ಅವಶ್ಯವಿದೆ ಎಂದು ಅಂದಾಜಿಸಲಾಗಿದೆ ಎಂದು ತಿಳಿಸಿದರು.

ಬಸವನಬಾಗೇವಾಡಿ ಶಾಸಕ ಶಿವಾನಂದ ಪಾಟೀಲರ್ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಆರೋಗ್ಯ ಸಚಿವರು, ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಪೈಕಿ 1659 ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಹುದ್ದೆಗಳನ್ನು ವಿಶೇಷ ನೇಮಕಾತಿ ಸಮಿತಿಯಿಂದ ನೇಮಕ ಮಾಡಿಕೊಳ್ಳಲಾಗುವುದು ಎಂದ ಅವರು ದಿನಾಂಕ 30-05-2017 ರಂದು ಅಧಿಸೂಚನೆ ಹೊರಡಿಸಿ ಅಭ್ಯರ್ಥಿಗಳಿಂದ ಆನ್‌ಲೈನ್ ಮುಖಾಂತರ ಅರ್ಜಿ ಆಹ್ವಾನಿಸಲಾಗಿದೆ ಎಂದರು.

ಕೊರಟಗೆರೆ ಶಾಸಕ ಸುಧಾಕರ್ ಲಾಲ್ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಆರೋಗ್ಯ ಸಚಿವರು ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳು ಮೃತಪಟ್ಟಾಗ ಅವರ ಊರಿಗೆ/ಶವಾಗಾರಕ್ಕೆ ಶವವನ್ನು ತೆಗೆದುಕೊಂಡು ಹೋಗಲು ಶ್ರದ್ಧಾಂಜಲಿ ವಾಹನಗಳ ಸೇವೆಯನ್ನು ಈಗಾಗಲೇ ಎಲ್ಲಾ ಜಿಲ್ಲೆಗಳಲ್ಲಿ ಪ್ರಾರಂಭ ಮಾಡಲಾಗಿದ್ದು, ಈ ವಾಹನಗಳಿಗೆ ಒಬ್ಬ ಖಾಯಂ/ಗುತ್ತಿಗೆ ಆಧಾರದ ವಾಹನ ಚಾಲಕನನ್ನು ಒದಗಿಸಲಾಗಿದೆ. ಉಚಿತ ಶ್ರದ್ಧಾಂಜಲಿ ಸೇವೆಗೆ ಅಗತ್ಯವಿರುವ ಅನುದಾನವನ್ನು ಈಗಾಗಲೇ ಬಿಡುಗಡೆ ಮಾಡಿದೆ ಎಂದ ಅವರು ವಿಶೇಷ ಪ್ರಕರಣಗಳಲ್ಲಿ ಇಂತಹ ಸೇವೆಗೆ 108 ಆರೋಗ್ಯ ಕವಚ ಆ್ಯಂಬುಲೆನ್ಸ್‌ಗಳನ್ನು ಬಳಸಿಕೊಳ್ಳಲೂ ಸಹ ಮಾರ್ಗಸೂಚಿ ನೀಡಲಾಗಿದೆ ಎಂದರು.

ಬೆಳ್ತಂಗಡಿ ಶಾಸಕ ವಸಂತ ಬಂಗೇರ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಆರೋಗ್ಯ ಸಚಿವರು ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ 1065 ತಜ್ಞರೂ ಹಾಗೂ 365 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ತುರ್ತಾಗಿ ಭಡ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಅಂತಿಮ ನೇಮಕಾತಿ ನಿಯಮಗಳನ್ನು ಹೊರಡಿಸುವ ಪ್ರಕ್ರಿಯೆ ಚಾಲನೆಯಲ್ಲಿದೆ ಎಂದ ಅವರು ಖಾಲಿ ಇರುವ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಆಯಾ ಜಿಲ್ಲಾಧಿಕಾರಿಗಳು/ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. 3274 ವಿವಿಧ ಅರೆವೈದ್ಯಕೀಯ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ದಿನಾಂಕ: 30-054-2017 ರಂದು ಅಧಿಸೂಚನೆ ಹೊರಡಿಸಿದ್ದು ಅರ್ಹರಿಂದ ಆನ್‌ಲೈನ್ ಮುಖಾಂತರ ಅರ್ಜಿಯನ್ನು ಆಹ್ವಾನಿಸಲಾಗಿದೆ. 436 ವಾಹನ ಚಾಲಕರ ಹುದ್ದೆಗಳಿಗೆ ಹೊರಿಡಿಸಿದ ನೇಮಕಾತಿ ಅಂತಿಮ ಹಂತದಲ್ಲಿದ್ದು ಅತಿ ಶೀಘ್ರವಾಗಿ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಿಸಲಾಗುವುದೆಂದರು.

**899 ಗುತ್ತಿಗೆ ಆಧಾರದ ಶುಶ್ರೂಷಕರನ್ನು ಕೃಪಾಂಕ ಮತ್ತು ವಯೋಮಿತಿ ಸಡಿಲಿಕೆ ನೀಡಿ ನೇಮಿಸಲು ಅಂತಿಮ ಸೂಚನೆ ಹೊರಡಿಸಿದ್ದು, ವಿಶೇಷ ಸಮಿತಿ ಮುಖಾಂತರ ನೇಮಕಾತಿ ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿದೆ ಎಂದರು.**

**ರಾಜ್ಯದಲ್ಲಿ ಎಲ್ಲಾ ಗ್ರೂಪ್ "ಡಿ" ಹುದ್ದೆಗಳನ್ನು ಜಿಲ್ಲಾ ಮಟ್ಟದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ದಿನಾಂಕ: 26-10-2016 ರಂದು ಆದೇಶಿಸಲಾಗಿದೆ ಎಂದರು.**

**2017ನೇ ಸಾಲಿನ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ವಿಧೇಯಕವನ್ನು ಪರ್ಯಾಲೋಚಿಸಿ ಅಂಗೀಕರಿಸುವ ಸಂಬಂಧ ಮುಖ್ಯಮಂತ್ರಿಗಳು ಸದರಿ ವಿಧೇಯಕವನ್ನು ಸದನದ ಮುಂದಿಟ್ಟರು.**

**ಇದರ ಜೊತೆಗೆ 2017 ನೇ ಸಾಲಿನ ಕರ್ನಾಟಕ ಮಾರಾಟ ತೆರಿಗೆಗಳ (ತಿದ್ದುಪಡಿ) ವಿಧೇಯಕವನ್ನೂ ಸಹ ಪರ್ಯಾಲೋಚಿಸಿ ಅಂಗೀಕರಿಸುವಂತೆ ಮುಖ್ಯಮಂತ್ರಿಗಳು ಸದನವನ್ನು ಕೋರಿದರು.**

**ಎಸ್‌ಎಂ:ಕೆಎನ್‌ಕೆ:ಜೆಡಿ:ಜಿಪಿಆರ್.**

## ವಿವಿಧ ಹುದ್ದೆಗಳಿಗೆ ಸಂದರ್ಶನ

**ಬೆಂಗಳೂರು, ಜೂನ್ 15, (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಗವು ವಿವಿಧ ಹುದ್ದೆಗಳಿಗಾಗಿ ಸಂದರ್ಶನವನ್ನು ಆಯೋಗದ ಕೇಂದ್ರ ಕಚೇರಿ ಬೆಂಗಳೂರಿನಲ್ಲಿ ನಡೆಸಲಿದೆ. ಹುದ್ದೆಗಳ ಸಂದರ್ಶನದ ದಿನಾಂಕ ಹಾಗೂ ಅವುಗಳ ಸಮಯವನ್ನು ಈ ಕೆಳಕಂಡಂತೆ ನಡೆಸಲಿದೆ.

ಮೀನುಗಾರಿಕೆ ಇಲಾಖೆಯಲ್ಲಿನ ಹಿರಿಯ ಸಹಾಯಕ ನಿರ್ದೇಶಕ ಹುದ್ದೆಗೆ ಹಾಗೂ ಭಾಷಾಂತರ ನಿರ್ದೇಶನಾಯದ ಭಾಷಾಂತರಕಾರರು ಹುದ್ದೆಗಳಿಗೆ ಸಂದರ್ಶನ ದಿನಾಂಕ: 22-06-2017 ರಂದು ಬೆಳಿಗ್ಗೆ 9-30 ಗಂಟೆಗೆ ನಡೆಯಲಿದೆ

ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಪ್ರಾಂಶುಪಾಲರ ಹುದ್ದೆಗೆ ಸಂದರ್ಶನ ದಿನಾಂಕ: 22-06-2017 ರಂದು ಮಧ್ಯಾಹ್ನ 2-30 ಗಂಟೆಗೆ ನಡೆಯಲಿದೆ.

ಮೀನುಗಾರಿಕೆ ಇಲಾಖೆಯಲ್ಲಿ ಮೀನುಗಾರಿಕೆ ಸಹಾಯಕ ನಿರ್ದೇಶಕರ ಹುದ್ದೆಗಳಿಗೆ ಸಂದರ್ಶನ ದಿನಾಂಕ: 23-06-2017 ರಂದು ಬೆಳಿಗ್ಗೆ 9-30 ಹಾಗೂ ಮಧ್ಯಾಹ್ನ 2-30 ಗಂಟೆಗೆ ಹಾಗೂ 27-06-2017 ರಂದು ಬೆಳಿಗ್ಗೆ 9-30 ಗಂಟೆಗೆ ನಡೆಯಲಿದೆ.

ಅರ್ಹ ಅಭ್ಯರ್ಥಿಗಳಿಗೆ ಸಂದರ್ಶನ ಸೂಚನಾ ಪತ್ರಗಳನ್ನು ಈಗಾಗಲೇ ಕಳುಹಿಸಲಾಗಿದ್ದು, ಸಂದರ್ಶನಕ್ಕೆ ಅರ್ಹರಾದ/ತಿರಸ್ಕೃತ ಅಭ್ಯರ್ಥಿಗಳ ಪಟ್ಟಿಗಳನ್ನು ಮಾಹಿತಿಗಾಗಿ ಆಯೋಗದ ವೆಬ್‌ಸೈಟ್

http://kpsc.kar.nic.in/Eligibility List/Rejected List ಗಳಲ್ಲಿ ಪ್ರಕಟಿಸಲಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## OORJA CAPES YOUTH UNDER – 19 FOOTBALL TALENT HUNT TOURNMENT (BOYS 7 GIRLS) 2017

**Bengaluru, June 15, (Karnataka Information)**

Ministry of Home Affairs has proposed to organize, under – 19 Football Tournment joinly by CAPFs all over the country, under the aegis of All India Police Sports Control Board, prior to under-17 FIFA Worls Cup 2017 to be held in India in Oct' 2017.

Opening Ceremony for 2nd Phase Oorja CAPFS Youth Under-19 Football Talent Hunt Tournament (Boys & Girls) is being organized on 17-06-2017 at Sree Kanteerava Stadium Bengaluru at 14.00 hrs. The Chief Guest for the event will be Dr. G. Parameshwara, Hon'ble Home Minister, Govt. of Karnataka.

In the above series, BSF Bengaluru has been assigned responsibility to conduct 2nd Phase Oorja CAPFS Youth Under – 19 Football Talent Hunt Tournament (Boys & Girls) in the State of Karnataka from June 17 to 25.

sm/jd/gpr

## ಯಲಹಂಕದಲ್ಲಿ ಸಾರಿಗೆ ಅದಾಲತ್

**ಬೆಂಗಳೂರು, ಜೂನ್ 15, (ಕರ್ನಾಟಕ ವಾರ್ತೆ)**

ಪ್ರಾದೇಶಿಕ ಸಾರಿಗೆ ಕಚೇರಿ ಯಲಹಂಕದಲ್ಲಿ ಜೂನ್ 19 ರಂದು ಸಂಜೆ 4–00 ಗಂಟೆಗೆ ಸಾರಿಗೆ ಅದಾಲತ್‌ನ್ನು ಏರ್ಪಡಿಸಿದೆ.

ಈ ಅದಾಲತ್ತನಲ್ಲಿ ಸಾರಿಗೆ ಇಲಾಖೆಯ ಅಧಿಕಾರಿಗಳು ಭಾಗವಹಿಸಲಿದ್ದು ಸಾರ್ವಜನಿಕ ಅಹವಾಲುಗಳಿಗೆ ಸ್ಪಂದಿಸಿ ಈ ಕಚೇರಿಯ ಕಾರ್ಯವೈಖರಿಯ ಬಗ್ಗೆ ಹಾಗೂ ಕುಂದುಕೊರತೆಗಳ ಬಗ್ಗೆ ಸೂಕ್ತಕ್ರಮ ಕೈಗೊಳ್ಳಲಿದ್ದು, ಈ ವ್ಯಾಪ್ತಿಯ ಸಾರ್ವಜನಿಕರು ಈ ಅದಾಲತ್‍ನ ಪ್ರಯೋಜನವನ್ನು ಪಡೆಯಬಹುದಾಗಿದೆ.

ಎಸ್‍ಎಂ:ಜೆಡಿ:ಜಿಪಿಆರ್.

## ನಗರ ಸ್ಥಳೀಯ ಸಂಸ್ಥೆಗಳ ಉಪ ಚುನಾವಣೆ – 2017

ಬೆಂಗಳೂರು, ಜೂನ್ 15, (ಕರ್ನಾಟಕ ವಾರ್ತೆ)

ರಾಜ್ಯ ಚುನಾವಣಾ ಆಯೋಗವು ನಗರ ಸ್ಥಳೀಯ ಸಂಸ್ಥೆಗಳ ವಾರ್ಡುಗಳ ವಿವಿಧ ಕಾರಣಗಳಿಂದ ತೆರವಾಗಿರುವ ಸದಸ್ಯ ಸ್ಥಾನಕ್ಕೆ ಜುಲೈ 4ರಂದು ಉಪ ಚುನಾವಣೆಯನ್ನು ನಡೆಸಲು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ಚುನಾವಣೆ) ಹಾಗೂ ಕರ್ನಾಟಕ ಮುನಿಸಿಪಾಲಿಟೀಸ್ (ಕೌನ್ಸಿಲರುಗಳ ಚುನಾವಣೆ) ನಡೆಸಲು ಉದ್ದೇಶಿಸಿದೆ.

ಮೈಸೂರು ಜಿಲ್ಲೆಯ ಮೈಸೂರು ಮಹಾನಗರಪಾಲಿಕೆಗೆ ವಾರ್ಡ್ ನಂ 32, ಬೆಂಗಳೂರು ನಗರ, ಬೊಮ್ಮಸಂದ್ರ ಪುರಸಭೆ ವಾರ್ಡ್ ನಂ –16, ಕೋಲಾರ ಜಿಲ್ಲೆಯ ಕೋಲಾರ ನಗರಸಭೆ – ವಾರ್ಡ್ ನಂ 21, ಮಂಡ್ಯ ಜಿಲ್ಲೆಯ ಮಂಡ್ಯ ನಗರಸಭೆ – ವಾರ್ಡ್ ನಂ 28, ಬೆಳಗಾವಿ ಜಿಲ್ಲೆಯ ಐನಾಪೂರ ಪಟ್ಟಣ ಪಂಚಾಯಿತಿ ವಾರ್ಡ್ ನಂ –15, ವಿಜಯಪುರ ಜಿಲ್ಲೆಯ ಇಂಡಿ ಪುರಸಭೆ – ವಾರ್ಡ್ ನಂ 18, ಹಾವೇರಿ ಜಿಲ್ಲೆಯ ರಾಣೆಬೆನ್ನೂರು ನಗರಸಭೆ – ವಾರ್ಡ್ ನಂ –30, ಬೀದರ್ ಜಿಲ್ಲೆಯ ಬೀದರ್ ನಗರಸಭೆ – ವಾರ್ಡ್ ನಂ 33, ಗದಗ ಜಿಲ್ಲೆಯ ನರೇಗಲ್ ಪಟ್ಟಣ ಪಂಚಾಯಿತಿ – ವಾರ್ಡ್ ನಂ 15, ಕಲಬುರಗಿ ಜಿಲ್ಲೆಯ ಸೇಡಂ ಪುರಸಭೆ– 15, ಬಾಗಲಕೋಟೆ ಜಿಲ್ಲೆಯ ಇಳಕಲ್ ನಗರಸಭೆ – ವಾರ್ಡ್ ನಂ 13, 24, ಬೆಳಗಲಿ ಪಟ್ಟಣ ಪಂಚಾಯಿತಿ – ವಾರ್ಡ್ ನಂ 08 ಹಾಗೂ ಹುನಗುಂದ ಪುರಸಭೆ – ವಾರ್ಡ್ ನಂ 03. ಈ ಪ್ರದೇಶಗಳಲ್ಲಿ ಚುನಾವಣೆ ನಡೆಯಲಿದೆ.

### ಚುನಾವಣಾ ವೇಳಾಪಟ್ಟಿ:

ಜಿಲ್ಲಾಧಿಕಾರಿಗಳು ಚುನಾವಣಾ ಅಧಿಸೂಚನೆಯನ್ನು ಹೊರಡಿಸುವ ದಿನಾಂಕ ಮತ್ತು ದಿನ – 14–06–2017 ಬುಧವಾರ, ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ದಿನ – 21–06–2017 ಬುಧವಾರ, ನಾಮಪತ್ರಗಳನ್ನು ಪರಿಶೀಲಿಸುವ ದಿನಾಂಕ ಮತ್ತು ದಿನ– 22–06–2017, ಗುರುವಾರ, ಉಮೇದುವಾರಕೆಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ ಮತ್ತು ದಿನ –24–06–2017 ಶನಿವಾರ, ಮತದಾನ ಅವಶ್ಯವಿದ್ದರೆ, ಮತದಾನವನ್ನು ನಡೆಸಬೇಕಾದ ದಿನಾಂಕ ಮತ್ತು ದಿನ ಸಮಯ ಬೆಳಿಗ್ಗೆ 7–00 ಗಂಟೆಯಿಂದ ಸಾಯಂಕಾಲ 5–00 ಗಂಟೆವರೆಗೆ – 02–07–2017 ಭಾನುವಾರ, ಮರು ಮತದಾನ ಇದ್ದಲ್ಲಿ ಮತದಾನದ ಸಮಯ ಬೆಳಿಗ್ಗೆ 7.00 ಗಂಟೆಯಿಂದ ಸಾಯಂಕಾಲ 5.00 ಗಂಟೆವರೆಗೆ – 04–07–2017 ಮಂಗಳವಾರ, ಮತಗಳ ಎಣಿಕೆಯ ದಿನಾಂಕ ಮತ್ತು ದಿನ ಬೆಳಿಗ್ಗೆ 8.00 ಗಂಟೆಯಿಂದ ತಾಲ್ಲೂಕಿನ

ಕೇಂದ್ರ ಸ್ಥಳದಲ್ಲಿ – 05–07–2017 ಬುಧವಾರ, ಚುನಾವಣೆಯನ್ನು ಯಾವ ದಿನಾಂಕಕ್ಕೆ ಮುಂಚೆ ಮುಕ್ತಾಯಗೊಳಿಸಬೇಕೋ ಆ ದಿನಾಂಕ ಮತ್ತು ದಿನ – 05–07–2017 ಬುಧವಾರ ನಡೆಯಲಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿಗಳಿಗೆ ಮತ್ತು ಸಂಸ್ಥೆಗಳಿಗೆ ರಾಜ್ಯ ಪ್ರಶಸ್ತಿ ನೀಡಲು ನಾಮ ನಿರ್ದೇಶನಕ್ಕೆ ಅರ್ಜಿ ಆಹ್ವಾನ

**ಬೆಂಗಳೂರು, ಜೂನ್ 15, (ಕರ್ನಾಟಕ ವಾರ್ತೆ)**

ಕರ್ನಾಟಕ ಸರ್ಕಾರವು ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಕನಿಷ್ಠ 5 ವರ್ಷಗಳ ಕಾಲ ಅತ್ಯುತ್ತಮ ಸೇವೆ ಸಲ್ಲಿಸಿರುವಂತಹ ವ್ಯಕ್ತಿಗಳಿಗೆ ತಲಾ ರೂ.25,000/–ಗಳ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ಹಾಗೂ ಸಂಸ್ಥೆಗಳಿಗೆ ತಲಾ ರೂ.1.00 ಲಕ್ಷಗಳ ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರವನ್ನು ಮಕ್ಕಳ ದಿನಾಚರಣೆಯಂದು ಪ್ರದಾನ ಮಾಡಿ ಗೌರವಿಸುತ್ತದೆ.

2017ನೇ ಸಾಲಿನ ಪ್ರಶಸ್ತಿಗಾಗಿ ನಿಗದಿಪಡಿಸಿರುವ ಅರ್ಜಿ ನಮೂನೆಗಳನ್ನು ಸಂಬಂಧಿಸಿದ ಜಿಲ್ಲೆಯ ಉಪ ನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಇವರಿಂದ ಪಡೆದು ಭರ್ತಿ ಮಾಡಿದ ಅರ್ಜಿಗಳನ್ನು ದ್ವಿಪ್ರತಿಯಲ್ಲಿ ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ದಿನಾಂಕ:31.08.2017ರೊಳಗೆ ಸಲ್ಲಿಸತಕ್ಕದ್ದು. ನಿಗದಿತ ದಿನಾಂಕದ ನಂತರ ಸಲ್ಲಿಸಿದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ. ಅರ್ಜಿಗಳನ್ನು ಕನ್ನಡ ಭಾಷೆಯಲ್ಲಿಯೇ ಸಲ್ಲಿಸತಕ್ಕದ್ದು ಎಂದು ಪ್ರಕಟಣೆ ತಿಳಿಸಿದೆ.

## APPLICATIONS INVITED FOR STATE AWARD FOR INDIVIDUALS AND INSTITUTIONS IN THE FIELD OF CHILD WELFARE

Bangalore 15 (Karnataka Information)

Government of Karnataka confers award to individuals and institutions who have worked for the welfare of children for more than 5 years. Individual award carries cash prize of Rs. 25,000/- and a citation and Institutional award carries cash prize of Rs.1.00 lakh and a citation.

The prescribed forms for the year 2017 may be obtained from the Deputy Director of Women & Child Development Department in the respective districts. The filled applications should be submitted to the concerned District Deputy Director of Women & Child Development Department on or before 31.08.2017. The applications received after due date will not be considered. The applications should be submitted in kannada only.

## ಹರಾಜು

**ಬೆಂಗಳೂರು, ಜೂನ್ 15, (ಕರ್ನಾಟಕ ವಾರ್ತೆ)**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಎರಡು ಅಂಬಾಸಿಡರ್ ಕಾರುಗಳನ್ನು ಹೇಗಿದೆಯೋ ಹಾಗೆ ದಿನಾಂಕ 28- 06-2017 ರಂದು ಬೆಳಿಗ್ಗೆ 11.30 ಗಂಟೆಗೆ ನಂ. 17, ಭಗವಾನ್ ಮಹಾವೀರ ರಸ್ತೆ, (ಇನ್ ಫೆಂಟ್ರಿ ರಸ್ತೆ) ಬೆಂಗಳೂರು -560001 ಇಲ್ಲಿ ಟೆಂಡರ್ -ಕಂ-ಬಹಿರಂಗ ಹರಾಜು ಹಮ್ಮಿಕೊಂಡಿದೆ.

**ವಿಲೇವಾರಿ ಮಾಡಲಿರುವ ವಾಹನಗಳ ವಿವರಗಳು**

| ಕ್ರ.ಸಂ. | ವಾಹನಸಂಖ್ಯೆ | ಷರಾ |
|---|---|---|
| 1) | ಕೆಎ-01-ಜಿ-3192, ಅಂಬಾಸಿಡರ್ ಕಾರು | ನಿರುಪಯುಕ್ತ ಎಂದು ಘೋಷಿಸಲಾಗಿದೆ |
| 2) | ಕೆಎ-01-ಜಿ-3443 ಅಂಬಾಸಿಡರ್ ಕಾರು | ನಿರುಪಯುಕ್ತ ಎಂದು ಘೋಷಿಸಲಾಗಿದೆ |

ಈ ವಾಹನಗಳನ್ನು ಟೆಂಡರ್ ಹರಾಜು ಮೂಲಕ ಪಡೆಯಲು ಇಚ್ಛಿಸುವವರು ಮೊಹರಾದ ಟೆಂಡರ್ ಗಳನ್ನು ಪ್ರತಿ ವಾಹನಕ್ಕೆ ಪ್ರತ್ಯೇಕವಾಗಿ ವಾಹನದ ಸಂಖ್ಯೆ ನಮೂದಿಸಿ ಆಫರ್ ಗಳನ್ನು ಬರೆದು ಕಳುಹಿಸಬೇಕು. ಟೆಂಡರ್ ದಾರರು ಅವರ ವಿಳಾಸವನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು

ಒಂದು ಲಘು(ಕಾರು) ವಾಹನಕ್ಕೆ ರೂ. 5,000/- (ಐದು ಸಾವಿರ ರೂಪಾಯಿಗಳು ಮಾತ್ರ)ಗಳಂತೆ ಮುಂಗಡ ಠೇವಣಿ ಇಡಬೇಕಾಗಿರುತ್ತದೆ. ಒಂದೊಂದು ವಾಹನಕ್ಕೆ ಪ್ರತ್ಯೇಕವಾಗಿ ಠೇವಣಿ ಇ.ಎಂ.ಡಿ. ಹಣವನ್ನು ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು ಇವರ ಹೆಸರಿನಲ್ಲಿ ಡಿಮ್ಯಾಂಡ್ ಡ್ರಾಫ್ಟ್ ಪಡೆದು ಟೆಂಡರ್ ಆಫರ್ ಮತ್ತು ಡಿ.ಡಿ.ಯನ್ನು ಲಕೋಟೆಗಳಲ್ಲಿ ಮೊಹರ್ ಮಾಡಿ ದಿನಾಂಕ 27-06-2017 ರಂದು ಸಾಯಂಕಾಲ 4.00 ರ ಒಳಗಾಗಿ ನಿರ್ದೇಶಕರು, ನಂ. 17, ಭಗವಾನ್ ಮಹಾವೀರದ ರಸ್ತೆ, (ಇನ್ ಫೆಂಟ್ರಿ ರಸ್ತೆ) ಬೆಂಗಳೂರು -560001 ಇವರಿಗೆ ಕಳುಹಿಸಬೇಕು. ಹೀಗೆ ಕಳುಹಿಸುವ ಮೊಹರಾದ ಲಕೋಟೆಯ ಮೇಲೆ "ವಾಹನಗಳ ಹರಾಜಿನ ಟೆಂಡರ್" ಎಂದು ನಮೂದಿಸತಕ್ಕದ್ದು. ತಡವಾಗಿ ಬಂದ ಟೆಂಡರ್ ಗಳನ್ನು ಪರಿಗಣಿಸುವುದಿಲ್ಲ.

ನಿರುಪಯುಕ್ತ 02 ಕಾರುಗಳನ್ನು ದಿನಾಂಕ 28-06-2017 ರಂದು ಬೆಳಿಗ್ಗೆ 11.30 ಗಂಟೆ ನಂತರ ಕಛೇರಿಯ ಆವರಣದಲ್ಲಿ ಬಹಿರಂಗ ಹರಾಜು ಮಾಡಲಾಗುವುದು.

ಬಹಿರಂಗ ಹರಾಜಿನಲ್ಲಿ ಭಾಗವಹಿಸುವವರು ಮೇಲೆ ನಿಗದಿಪಡಿಸಿರುವಂತೆ ಒಂದೊಂದು ವಾಹನಕ್ಕೆ ಪ್ರತ್ಯೇಕ ಮುಂಗಡ ಠೇವಣಿ ರೂ. 5000/- ಹಣವನ್ನು ನಗದಾಗಿ ಅಥವಾ ಡಿ.ಡಿ.ಯ ಮೂಲಕ ಇಲಾಖೆಯ ಲೆಕ್ಕಪತ್ರಾದಿಕಾರಿ ಅವರಲ್ಲಿ ದಿನಾಂಕ:28-06-2017 ರಂದು ಬೆಳಿಗ್ಗೆ 10 ರಿಂದ 11 ಗಂಟೆಯೊಳಗೆ ಹಣ ಪಾವತಿ ಮಾಡಿದವರು ಮಾತ್ರ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಅರ್ಹರು. ಬಹಿರಂಗ ಹರಾಜು ಪ್ರಕ್ರಿಯೆ ಮುಗಿದ ನಂತರ ಮೊಹರಾದ ಟೆಂಡರುಗಳನ್ನು ತೆಗೆದು ಪರಿಶೀಲಿಸಲಾಗುವುದು.

ಟೆಂಡರ್ ಅಥವಾ ಹರಾಜಿನ ಬಿಡ್ಡುಗಳಲ್ಲಿ ಹೆಚ್ಚಿನ ಬಿಡ್ಡನ್ನು ಅಂಗೀಕರಿಸುವ ಅಥವಾ ನಿರಾಕರಿಸುವ ಹಕ್ಕನ್ನು ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಅವರು ಹೊಂದಿರುತ್ತಾರೆ. ಒಪ್ಪಿಗೆಯಾದ ಬಿಡ್ಡನ್ನು ಟೆಂಡರ್ ದಾರರು ಹಾಗೂ ಬಿಡ್ಡುದಾರರು ಬಿಡ್ಡು ಮಾಡಿದ ಮೊತ್ತ ಮತ್ತು ತೆರಿಗೆ ಸೇರಿಸಿ ಅಂದೇ ಪೂರ್ಣ ಹಣವನ್ನು ಪಾವತಿ ಮಾಡಿ ವಾಹನವನ್ನು ಸುಪರ್ದಿಗೆ ಪಡೆದುಕೊಳ್ಳಬೇಕು. ತಪ್ಪಿದಲ್ಲಿ ಬಿಡ್ಡುದಾರರ/ಟೆಂಡರ್ ದಾರರ ಠೇವಣಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಈ ಹಳೆ ವಾಹನಗಳನ್ನು ಇಲಾಖೆಯ ಆವರಣದಲ್ಲಿ ಕಛೇರಿ ಕಾರ್ಯ ನಿರ್ವಹಿಸುವ ದಿನಗಳಲ್ಲಿ ಕಛೇರಿಯ ವೇಳೆಯಲ್ಲಿ ಪರಿಶೀಲಿಸಬಹುದು.

## ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದಿಂದ ಕಾರ್ಯಾಗಾರ

**ಬೆಂಗಳೂರು, ಜೂನ್ 15, (ಕರ್ನಾಟಕ ವಾರ್ತೆ)**

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಮಾನವ ಹಕ್ಕುಗಳ ರಕ್ಷಣೆ, ಅನಕ್ಷರತೆ ಕುರಿತು ನಾಗರಿಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಮಾಧ್ಯಮಗಳ ಮೂಲಕ ಪ್ರಕಟಣೆ ಹಾಗೂ ಕಾರ್ಯಾಗಾರಗಳ ಮೂಲಕ ಅರಿವು ಮೂಡಿಸುವ ಕಾರ್ಯ ನಿರ್ವಹಿಸುತ್ತಿದೆ.

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ಸಹಯೋಗದೊಂದಿಗೆ "ಮಾನವ ಹಕ್ಕುಗಳ ಪ್ರಚಾರ ಮತ್ತು ರಕ್ಷಣೆ ಕುರಿತು ಮಾಧ್ಯಮಗಳ ಪಾತ್ರ " ವಿಷಯದ ಕುರಿತು ಒಂದು ದಿನದ ಕಾರ್ಯಾಗಾರವನ್ನು ಬೆಂಗಳೂರಿನ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ಆವರಣದಲ್ಲಿ ಜೂನ್ 22 ರಂದು ಆಯೋಜಿಸಿದೆ.

ಕಾರ್ಯಾಗಾರದಲ್ಲಿ ಆಯೋಗದ ಅಧ್ಯಕ್ಷರಾದ ನ್ಯಾಯಮೂರ್ತಿ ಹೆಚ್.ಎಲ್. ದತ್ತು, ಆಯೋಗದ ಸದಸ್ಯ, ನ್ಯಾಯಮೂರ್ತಿ ಡಿ. ಮುರುಗೇಶನ್, ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಆರ್. ವೆಂಕಟರಾವ್, ಫ್ರಂಟ್‌ಲೈನ್ ಎಡಿಟರ್ ಇನ್ ಚೀಫ್ ಶೇಖರ್ ಗುಪ್ತ ಅವರುಗಳು ಮಾತನಾಡಲಿರುವರು.

ಈ ಕಾರ್ಯಾಗಾರದಲ್ಲಿ ಭಾಗವಹಿಸಲಿರುವ ಮಾಧ್ಯಮದವರು ಅಂದು ಬೆಳಿಗ್ಗೆ 10.00 ಗಂಟೆಗೆ ಉಪಸ್ಥಿತರಿಸಲು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಪ್ರಕಟಣೆ ತಿಳಿಸಿದೆ.